ಓ.ಎಸ್. ನಂ.109/2021
ಪಿ. ಡಬ್ಲ್ಯೂ-1

<u>ದಿನಾಂಕಃ **08-07-2025**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ.ಐ.ಎಂ.ಆರ್ ರವರಿಂದ

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ಇಂದು ನನ್ನ ಮುಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜವಿರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

1. ದಿನಾಂಕಃ 24.08.2018 ರಲ್ಲಿ ನೊಂದಣಿಯಾದ ಮೂಲ ಖರೀದಿ ಕರಾರು ಪತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿದಾರರಾದ ರಾಜು ಮತ್ತು ಧನರಾಜ್ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅದರ ಮೇಲೆ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ನಿಪಿ 1(ಎ) ರಿಂದ 1(ಡಿ) ಎಂದು ಗುರುತಿಸಲಾಯಿತು. ಅದೇ ರೀತಿ 1 ನೇ ಪ್ರತಿವಾದಿಯ ಸಹಿಗಳನ್ನು ಸಹ ನೋಡಿ ಗುರುತಿಸಿರುತ್ತಾರೆ. ನಿಪಿ 1 ನ್ನು ಕೃಷ್ಣ ಡಿ ಅನಿಕೇರಿ ವಕೀಲರು ತಯಾರಿಸಿರುತ್ತಾರೆ. ಅವರ ಸಹಿಯನ್ನು ಸಹ ನೋಡಿದರೆ ಗುರುತಿಸುತ್ತೇನೆ.

2. ದಿನಾಂಕಃ 19.09.2018 ರ ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

3. ದಿನಾಂಕಃ 03.08.2021 ರಂದು 1 ನೇ ಪ್ರತಿವಾದಿಗೆ ನೀಡಿದ ಕಚೇರಿಯ ನೋಟೀಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

4. ಅಂಚೆ ರಸೀದಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

5. ಪೋಸ್ಟಲ್ ಟ್ರ್ಯಾಕ್‌ನ್ನು ಹಾಜರುಪಡಿಸಿರುತ್ತಾರೆ.

6. ದಿನಾಂಕಃ 13.02.2019 ರಲ್ಲಿ ನೊಂದಣಿಯಾದ ಕ್ರಯ ಪತ್ರದ ನೆರಳಚ್ಚು ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

7. ಎಂ ಆರ್ ನಂಃ ಪಿ-19/2018-19 ರ ನೇದ್ದರ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

8. ಮುದ್ನಾಳ ಗ್ರಾಮದ ಸರ್ವೆ ನಂಃ 70*/2 ನೇದ್ದರ ಗಣೀಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 6 ಎಂದು ಗುರುತಿಸಲಾಯಿತು.

9. ಮುದ್ನಾಳ ಗ್ರಾಮದ ಸರ್ವೆ ನಂಃ 70*/2 ನೇದ್ದರ ಗಣೀಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 7 ಎಂದು ಗುರುತಿಸಲಾಯಿತು.

10. ಮುದ್ನಾಳ ಗ್ರಾಮದ ಸರ್ವೆ ನಂಃ 70*/4 ನೇದ್ದರ ಗಣೀಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 8 ಎಂದು ಗುರುತಿಸಲಾಯಿತು.

11. ಮುದ್ನಾಳ ಗ್ರಾಮದ ಸರ್ವೆ ನಂಃ 70*/6 ನೇದ್ದರ ಗಣೀಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 9 ಎಂದು ಗುರುತಿಸಲಾಯಿತು.

12. ಮುದ್ನಾಳ ಗ್ರಾಮದ ಸರ್ವೆ ನಂಃ 70*/6 ನೇದ್ದರ ಗಣೀಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 10 ಎಂದು ಗುರುತಿಸಲಾಯಿತು.

13. ಮುದ್ನಾಳ ಗ್ರಾಮದ ಸರ್ವೆ ನಂಃ 70*/6 ನೇದ್ದರ ಗಣೀಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 11 ಎಂದು ಗುರುತಿಸಲಾಯಿತು.

14. ಮುದ್ನಾಳ ಗ್ರಾಮದ ಸರ್ವೆ ನಂಃ 70*/6 ನೇದ್ದರ ಗಣೀಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 12 ಎಂದು ಗುರುತಿಸಲಾಯಿತು.

15. ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 13 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ